ರಸ್ತೆ ದುರಸ್ತಿ

1 (53) ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ – ನಾರಾಯಣಪುರಕ್ಕೆ ಸೇರುವ ಮುಖ್ಯರಸ್ತೆ ಸಂಚಾರವು ಯೋಗ್ಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯು ಒಟ್ಟು ಎಷ್ಟು ಕಿ.ಮೀ. ಉದ್ದ ಇರುತ್ತದೆ;

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆ ಮಾಡಿರುವ ವೆಚ್ಚ ಎಷ್ಟು;

ಈ) ಈ ರಸ್ತೆಯನ್ನು ದುರಸ್ತಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರವು ಯಾವ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು);

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಬಂದಿದೆ.

ಆ) ಈ ರಸ್ತೆಯ ಒಟ್ಟು ಉದ್ದ 53 ಕಿ.ಮೀ. ಇರುತ್ತದೆ.

ಇ) ಆಲಮಟ್ಟಿ–ಮುದ್ದೇಬಿಹಾಳ ರಸ್ತೆಗೆ ರೂ.31.20 ಲಕ್ಷಗಳು.

ಮುದ್ದೇಬಿಹಾಳ–ನಾರಾಯಣಪುರ ರಸ್ತೆಗೆ ರೂ.62.48 ಲಕ್ಷಗಳು.

ಈ) ಮುದ್ದೇಬಿಹಾಳ–ನಾರಾಯಣಪುರ ರಸ್ತೆಗೆ ರೂ.4.415 ಕೋಟಿಗಳಿಗೆ ಹಾಗೂ ಮುದ್ದೇಬಿಹಾಳ–ನಾರಾಯಣಪೂರ ರಸ್ತೆಗೆ ರೂ.4.520 ಕೋಟಿಗಳಿಗೆ ನಬಾರ್ಡ್‌ರಡಿ ಕಾಮಗಾರಿಗೆ ಅನುಮೋದನೆ ನೀಡಿರುವುದಲ್ಲಿ ಸದರಿ ರಸ್ತೆಗಳು ಸೇರಿರುತ್ತವೆ. ಕಾಮಗಾರಿಯನ್ನು ಶೀಘ್ರದಲ್ಲೇ ಕೈಗೆತ್ತಿಕೊಳ್ಳಲಾಗುವುದು.